ಬೇಕಾಗಿಲ್ಲ. ಗ್ರಾಮಾಂತರ ಪ್ರದೇಶದಲ್ಲಿರುವ ಜನರು ತಮ್ಮ ಸರಕು ಸಾಗಾಣಿಕೆ ಮಾಡಬೇಕಾದರೆ ಗ್ರಾಮಾಂತರ ಪ್ರದೇಶಗಳ ರಸ್ತೆಗಳ ಅಭಿವೃದ್ಧಿ ಅವಶ್ಯಕವಾಗಿ ಆಗಬೇಕಾಗಿದೆ. ಅದಾಗಬೇಕಾದರೆ ಒಂದು ಕ್ಷೇತ್ರಕ್ಕೆ ಕನಿಷ್ಟ ಪಕ್ಷ 2–3 ಕೋಟಿ ರೂಪಾಯಿಗಳನ್ನು ಪ್ರತಿ ವರ್ಷ ಕೊಡದಿದ್ದರೆ ಇನ್ನು 50 ವರ್ಷವಾದರು ಗ್ರಾಮಾಂತರ ಪ್ರದೇಶದ ರಸ್ತೆಗಳ ಅಭಿವೃದ್ಧಿಯಾಗುವುದಿಲ್ಲ. ನಮ್ಮ ಮದ್ದೂರು ತಾಲ್ಲೂಕಿನಲ್ಲಿ 1300 ಕಿ.ಮೀ. ರಸ್ತೆ ಇದೆ. ಅದರಲ್ಲಿ 183 ಕಿ.ಮೀ. ರಸ್ತೆ ರಾಷ್ಟ್ರೀಯ ಹಾಗೂ ರಾಜ್ಯ ಹೆದ್ದಾರಿಯಾಗಿದೆ, ಉಳಿದ 1100 ಕಿ.ಮೀ. ಹಳ್ಳಿಗಾಡಿನ ರಸ್ತೆ ಇದನ್ನು ಇವರು ಕೊಡುವ 1 ಕೋಟಿ ರೂಪಾಯಿಯಲ್ಲಿ ಎಷ್ಟು ವರ್ಷ ಅಭಿವೃದ್ಧಿಪಡಿಸುವುದಕ್ಕಾಗುತ್ತದೆ? ದಯಮಾಡಿ, ಮಾನ್ಯ ಮಂತ್ರಿಗಳು ಸರ್ಕಾರದ ಮೇಲೆ ಒತ್ತಾಯ ತರಬೇಕು, ಆರ್ಥಿಕ ಮಂತ್ರಿ ಮನವರಿಗೆ ಮಾಡಿಕೊಡಬೇಕು, ಕೊನೆ ಪಕ್ಷ ಒಂದು ಕ್ಷೇತ್ರಕ್ಕೆ 2–3 ಕೋಟಿ ರೂಪಾಯಿ ಗಳನ್ನು ಕೊಡದಿದ್ದರೆ, ಈ ಗ್ರಾಮಾಂತರ ಪ್ರದೇಶದ ರಸ್ತೆಗಳನ್ನು ಇನ್ನು 50 ವರ್ಷಗಳಾ ದರೂ ಅಭಿವೃದ್ಧಿ ಮಾಡುವುದಕ್ಕಾಗುವುದಿಲ್ಲ, ತಾವು ಈ ದಿಶೆಯಲ್ಲಿ ಪ್ರಾಮಾಣಿಕ ಪ್ರಯತ್ನ ಮಾಡಬೇಕು, ಮುಖ್ಯಮಂತ್ರಿಗಳ ಮೇಲೆ ಒತ್ತಡವನ್ನು ತರಬೇಕು, ಗ್ರಾಮಾಂ ತರ ಪ್ರದೇಶಗಳ ಈ ರಸ್ತೆಗಳನ್ನು ಅಭಿವೃದ್ಧಿ ಮಾಡಬೇಕೆಂದು ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 3488
ಪ್ರಶ್ನೆ ಕೇಳಿರುವ ಸದಸ್ಯರು: ಶ್ರೀ ಶಿವಶಂಕರ ರೆಡ್ಡಿ ಎನ್.ಎಚ್.
ಉತ್ತರಿಸುವವರು: ಶ್ರೀ ಡಿ. ಮಂಜುನಾಥ್

ಪ್ರಶ್ನೆ	ಉತ್ತರ
ಅ) ಗೌರಿಬಿದನೂರು ತಾಲ್ಲೂಕಿನಲ್ಲಿ 48 ಪ್ರೌಢಶಾಲೆಗಳಿದ್ದು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಬಂದಿದೆ
ಆ) ಇದರಿಂದ ಸಾವಿರಾರು ಬಡ ವಿದ್ಯಾರ್ಥಿಗಳು ಖಾಸಗಿ ಸಂಸ್ಥೆಗಳಿಗೆ ಹೆಚ್ಚಿನ ವಂತಿಗೆ ಶುಲ್ಕ ಭರಿಸುತ್ತಿರುವುದು ಸರ್ಕಾರಕ್ಕೆ ತಿಳಿದಿದೆಯೇ;	ಗೌರಿಬಿದನೂರಿನಲ್ಲಿ ಎರಡು ಅನುದಾನಿತ ಕಾಲೇಜುಗಳಿವೆ (1) ಏ.ಇ.ಎಸ್. ನ್ಯಾಷನಲ್ ಕಾಲೇಜು 2) ಆಚಾರ್ಯ ಮಹಿಳಾ ಪ್ರಥಮ ದರ್ಜೆ ಕಾಲೇಜು

ಪ್ರಶ್ನೆ	ಉತ್ತರ
	ಈ ಕಾಲೇಜುಗಳು ಸರ್ಕಾರ ನಿಗದಿಪಡಿಸಿರುವುದಕ್ಕಿಂತ ಹೆಚ್ಚು ಶುಲ್ಕವನ್ನು ಪಡೆಯುತ್ತಿರುವ ಬಗ್ಗೆ ಸರ್ಕಾರಕ್ಕೆ ದೂರುಗಳು ಬಂದಿರುವುದಿಲ್ಲ.
ಇ) ಇದನ್ನು ನಿವಾರಿಸಲು ಮುಂದಿನ ಶೈಕ್ಷಣಿಕ ವರ್ಷದಲ್ಲಿ ಇಲ್ಲಿ ಒಂದು ಪ್ರಥಮ ದರ್ಜೆ ಕಾಲೇಜು ತೆರೆದು ಅನುಕೂಲ ಮಾಡಿಕೊಡುವ ಉದ್ದೇಶ ಸರ್ಕಾರಕ್ಕೆ ಇದೆಯೇ;	ಮುಂದಿನ ವರ್ಷದಲ್ಲಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜನ್ನು ಪ್ರಾರಂಭಿಸಲು ಅವಶ್ಯಕತೆ ಮೂಲಭೂತ ಸೌಲಭ್ಯಗಳ ಲಭ್ಯತೆ ಹಾಗೂ ಇಲಾಖೆಯ ಹಣ ಕಾಸಿನ ಪರಿಸ್ಥಿತಿಯನ್ನು ಗಮನದಲ್ಲಿಟ್ಟು ಕೊಂಡು ಪ್ರಸ್ತಾವನೆಯನ್ನು ಪರಿಶೀಲಿಸ ಲಾಗುವುದು.

ಶ್ರೀ ಎನ್. ಹೆಚ್. ಶಿವಶಂಕರೆಡ್ಡಿ: ಮಾನ್ಯ ಉಪಾಧ್ಯಕ್ಷರೆ, ನಮ್ಮಲ್ಲಿ ಸುಮಾರು 48 ಪ್ರೌಢಶಾಲೆಗಳಿವೆ ಮತ್ತು ಖಾಸಗಿ ಕಾಲೇಜುಗಳಿರುವುದು ನಿಜ, ಆದರೆ ಅಲ್ಲಿ ಬಹಳಷ್ಟು ಹೆಚ್ಚಿನ ವಿದ್ಯಾರ್ಥಿಗಳ ಕೊರತೆ ಬರುವುದರಿಂದ ಸುಮಾರು 1500 ವಿದ್ಯಾರ್ಥಿಗಳು ಪ್ರತಿ ವರ್ಷವೂ ಅಡ್ಮಿಷನ್ಸ್‌ಗೆ ಅನಿವಾರ್ಯವಾಗಿ ಬೇರೆ ಬೇರೆ ತಾಲ್ಲೂಕುಗಳಿಗೆ ಹೋಗುವಂತಹ ಪರಿಸ್ಥಿತಿ ಬಂದಿದೆ. ಹಿಂದೆ ನಮ್ಮ ಸಚಿವರು ನಮ್ಮ ಗೌರಿಬಿದನೂರಿಗೆ ಬಂದಾಗ ಪರಿಸ್ಥಿತಿಯ ಬಗ್ಗೆ ಮನವರಿಕೆ ಮಾಡಿಕೊಡಲಾಯಿತು, ಅವರು ಒಂದು ರೀತಿಯಲ್ಲಿ ಭರವಸೆಯನ್ನು ಕೂಡ ನೀಡಿದ್ದರು. ದಯಮಾಡಿ ಸ್ಪಷ್ಟವಾಗಿ ಅಲ್ಲಿ ಪ್ರಥಮ ದರ್ಜೆ ಕಾಲೇಜನ್ನು ತೆರೆಯುವುದಕ್ಕೆ ಮುಂದಿನ ವರ್ಷದಲ್ಲಿ ಅದನ್ನು ಮಾಡಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಡಿ. ಮಂಜುನಾಥ್: ಅಲ್ಲಿ ಒಂದು ಮಹಿಳೆಯರ ಮತ್ತೊಂದು ಪುರುಷರ ಹೀಗೆ ಎರಡು ಖಾಸಗಿ ಪ್ರಥಮ ದರ್ಜೆ ಕಾಲೇಜುಗಳಿದ್ದಾವೆ. ಆ ಎರಡು ಕಾಲೇಜುಗಳಿಗೆ ನಮ್ಮ ಅಧಿಕಾರಿಗಳನ್ನು ಕಳುಹಿಸಿದ್ದೆ, ಎರಡು ಪ್ರಥಮ ದರ್ಜೆ ಕಾಲೇಜುಗಳಿರುವುದರಿಂದ ಕೊಡುವುದಕ್ಕೆ ಬರುವುದಿಲ್ಲ, ಅವಶ್ಯಕತೆ ಇಲ್ಲವೆಂದು

ಹೇಳಿದ್ದಾರೆ. ನಾನು ಅಲ್ಲಿಗೆ ಹೋಗಿದ್ದಾಗ ಮಾನ್ಯ ಸದಸ್ಯರು ನನಗೆ ಕೇಳಿದ್ದರು, ಪಿಯುಸಿಗೆ ಕಟ್ಟಿರುವ ಒಳ್ಳೆಯ ಕಟ್ಟಡವೇನೋ ಇದೆ, ಆದರೂ ಕೂಡ ನಾನು ಅದನ್ನು ಪರಿಶೀಲನೆ ಮಾಡುತ್ತೇನೆ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 3677

ಸದಸ್ಯರ ಹೆಸರು : ಶ್ರೀ ನರೇಂದ್ರಬಾಬು ನೆ.ಲ.

ಉತ್ತರಿಸುವ ಸಚಿವರು : ಶ್ರೀ ರಾಮಲಿಂಗಾರೆಡ್ಡಿ (ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು)

ಪ್ರಶ್ನೆ	ಉತ್ತರ
ಅ. ಖಾಸಗಿ ಕಟ್ಟಡಗಳಲ್ಲಿ ಎಷ್ಟು ಶಾಲಾ ಮತ್ತು ಪದವಿ ಪೂರ್ವ ಕಾಲೇಜುಗಳನ್ನು ನಡೆಸಲಾಗುತ್ತಿದೆ;	517 ಸರ್ಕಾರಿ, ಪ್ರಾಥಮಿಕ ಶಾಲೆಗಳು ಹಾಗೂ 13 ಪ್ರೌಢಶಾಲೆಗಳು ಖಾಸಗಿ ಕಟ್ಟಡಗಳಲ್ಲಿ ನಡೆಯುತ್ತಿದೆ. ಯಾವುದೇ ಪದವೀ ಪೂರ್ವ ಕಾಲೇಜುಗಳು ಬಾಡಿಗೆ ಕಟ್ಟಡಗಳಲ್ಲಿ ನಡೆಯುತ್ತಿಲ್ಲ.
ಆ. ಇವುಗಳಿಗೆ ಸಂದಾಯ ಮಾಡುತ್ತಿರುವ ಬಾಡಿಗೆ ಹಣಎಷ್ಟು; (ಕಳೆದ 2 ವರ್ಷಗಳ ವರ್ಷವಾರು ವಿವರ ನೀಡುವುದು)	ಸಂದಾಯ ಮಾಡುತ್ತಿರುವ ಬಾಡಿಗೆ ಮೊತ್ತ 2002–03 50.25 ಲಕ್ಷ 2003–04 92.51 ಲಕ್ಷ 2004–05 87.27 ಲಕ್ಷ ಪದವಿ ಪೂರ್ವ ಕಾಲೇಜಿಗೆ ಸಂಬಂಧಿಸಿದಂತೆ ಈ ಪ್ರಶ್ನೆ ಉದ್ಭವಿಸುವುದಿಲ್ಲ.
ಇ. ರಾಜಾಜಿನಗರ ವ್ಯಾಪ್ತಿಯಲ್ಲಿನ ಸರ್ಕಾರಿ ಶಾಲೆಗಳು ಖಾಸಗಿ ಕಟ್ಟಡದಲ್ಲಿ ಪಾಠ – ಪ್ರವಚನಗಳನ್ನು ನಡೆಸುತ್ತಿದ್ದು, ಕಟ್ಟಡದ ಮಾಲೀಕರುಗಳಿಗೆ ಬಾಡಿಗೆ ನೀಡದೆ ಇರುವುದರಿಂದ ಶಾಲೆ ನಡೆಸುವುದು ಕಷ್ಟ ಸಾಧ್ಯವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಬಂದಿದೆ